# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

**ನಸದೊ/ತಾಂತ್ರಿಕ ವಿಭಾಗ/ಸಿಆರ್.05/2007-08** **ದಿನಾಂಕ: 24/05/2007**

## -:: ವಾರ್ಷಿಕ ಟೆಂಡರ್ ಪ್ರಕಟಣೆ ::-

ನಗರಸಭೆ ನೀರು ಸರಬರಾಜು ವಿಭಾಗಕ್ಕೆ ಸಂಬಂಧಿಸಿದಂತೆ 2007-08ನೇ ಸಾಲಿಗೆ ಈ ಕೆಳಕಂಡ ಕಾಮಗಾರಿಗಳಿಗೆ ಹಾಗೂ ನೀರು ಸರಬರಾಜು ಸಾಮಗ್ರಿಗಳನ್ನು ಸರಬರಾಜು ಮಾಡಲು ವಾರ್ಷಿಕ ಟೆಂಡರ್ ಪ್ರಕಟಣೆ ನೀಡಿದ್ದು, ಇಚ್ಛೆಯುಳ್ಳ ಅಧಿಕೃತ ಗುತ್ತಿಗೆದಾರರು/ಸರಬರಾಜುದಾರರು ತಮ್ಮ ಕನಿಷ್ಠದರದ ದ್ವಿಪ್ರತಿಯ ಟೆಂಡರ್‌ಗಳನ್ನು ನಿಗಧಿಪಡಿಸಿದ ಇ.ಎಂ.ಡಿಯನ್ನು ಡಿ.ಡಿ / ಕಛೇರಿಯಲ್ಲಿ ಪಾವತಿಸಿದ ನಗದು ರಸೀದಿಯೊಂದಿಗೆ ಸೀಲ್ ಮಾಡಿದ ಲಕೋಟೆಯಲ್ಲಿಟ್ಟು ದಿನಾಂಕ:24/06/2007ರ ಸಂಜೆ 4.30ಗಂಟೆಯೊಳಗಾಗಿ ಪೌರಾಯುಕ್ತರು,ನಗರಸಭೆ, ದೊಡ್ಡಬಳ್ಳಾಪುರರವರಿಗೆ ತಲುಪುವಂತೆ ಕಳುಹಿಸತಕ್ಕದ್ದು, ತಡವಾಗಿ ಬಂದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

1) ಖಾಲಿ ಟೆಂಡರ್ ಫಾರಂಗಾಗಿ ಅರ್ಜಿಸಲ್ಲಿಸುವ ದಿನಾಂಕ:24/06/2007ರ ಮಧ್ಯಾಹ್ನ 1.00ಗಂಟೆಯ ವರೆಗೆ,
2) ಖಾಲಿ ಟೆಂಡರ್ ಫಾರಂ ನೀಡುವ ದಿನಾಂಕ : 31/05/2007 ರಿಂದ 24/06/2007ರ ಮಧ್ಯಾಹ್ನ 2.00ಗಂಟೆಯುವರೆಗೆ,
3) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ :24/06/2007ರ ಸಂಜೆ 4.30ಗಂಟೆವರೆಗೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಇ.ಎಂ.ಡಿ. ಮೊತ್ತ | ಕಾಲಾವಧಿ |
|---|---|---|---|
| 1 | ನೀರು ಸರಬರಾಜು ಸಾಮಗ್ರಿಗಳನ್ನು ಸರಬರಾಜು ಮಾಡುವ ಕೆಲಸ (ಷಡ್ಯೂಲ್-ಬಿ ನಲ್ಲಿ ನಮೂದಿರುವಂತೆ) | 30,000.00 | 1ವರ್ಷ ಅವಧಿ |
| 2 | ನೀರು ಸರಬರಾಜು ವಿಭಾಗದ ಪೈಪ್ ಲೈನ್ ಮಣ್ಣು ಕಾಮಗಾರಿ<br>ಎ) ವಾರ್ಡ್ ನಂ. 1ರಿಂದ 15ರ ವರೆಗೆ<br>ಬಿ) ವಾರ್ಡ್ ನಂ. 16ರಿಂದ 31ರ ವರೆಗೆ | <br>5000.00<br>5000.00 | <br>1ವರ್ಷ ಅವಧಿ<br>1ವರ್ಷ ಅವಧಿ |
| 3 | ನೀರು ಸರಬರಾಜು ವಿಭಾಗದ ಕೊಳವೆ ಬಾವಿಗಳ ಸಬ್ ಮರ್ಸಿಬಲ್ ಮೋಟಾರ್ ಪಂಪ್, ಸ್ಟಾರ್ಟರ್ ಮತ್ತು ಸೆಂಟ್ರಿಫ್ಯೂಗಲ್ ಮೋಟಾರ್ ಪಂಪ್, ಸ್ಟಾರ್ಟರ್ ಹಾಗೂ ಇತರೆ ರಿಪೇರಿ ಕೆಲಸ. (ಷಡ್ಯೂಲ್-ಬಿ ನಲ್ಲಿ ನಮೂದಿಸಿರುವಂತೆ) | 10,000.00 | 1ವರ್ಷ ಅವಧಿ |

**ಷರತ್ತುಗಳು:- ಕ್ರ.ಸಂ.1ರ ಕಾಮಗಾರಿಗೆ**

1) ಸರಬರಾಜು ಮಾಡುವ ಸಾಮಗ್ರಿಗಳು ಷೆಡ್ಯೂಲ್-ಬಿ ನಲ್ಲಿ ನಮೂದಿರುವ ಕಂಪನಿಗಳದ್ದೆ ಆಗಿರಬೇಕು, ಹಾಗೂ ಐ.ಎಸ್.ಐ. ಮುದ್ರಿಕೆ ಹೊಂದಿರಬೇಕು,
2) ಸರಬರಾಜು ಮಾಡುವ ಸಾಮಗ್ರಿಗಳು ಎಲ್ಲಾ ತೆರಿಗೆಗಳನ್ನು ಒಳಗೊಂಡಿರತಕ್ಕದ್ದು, (ವ್ಯಾಟ್ ಸೇರಿ)
3) ಸರಬರಾಜು ಮಾಡುವ ಸಾಮಗ್ರಿಗಳು ಸರಬರಾಜು ಮಾಡುವಾಗ ಡ್ಯಾಮೇಜ್ ಆದಲ್ಲಿ ಬದಲಿ ಸಾಮಗ್ರಿಗಳನ್ನು ಕೊಡಬೇಕಾಗುತ್ತದೆ.
4) ಸಾಮಗ್ರಿಗಳನ್ನು ನಗರಸಭೆ ದಾಸ್ತಾನುವಿಗೆ ಸರಬರಾಜು ಮಾಡತಕ್ಕದ್ದು,
5) ಸಾಮಗ್ರಿಗಳನ್ನು ನಗರಸಭೆ ಅಗತ್ಯಕ್ಕೆ ತಕ್ಕಂತೆ ವಿಳಂಭ ಮಾಡದೇ ಸರಬರಾಜು ಮಾಡುವುದು.

**ಷರತ್ತುಗಳು :- ಕ್ರ.ಸಂ.2ರ ಕಾಮಗಾರಿಗೆ**

1) ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆ ನೋಂದಾಯಿತ 3ನೇ ದರ್ಜೆ ಮೇಲ್ಪಟ್ಟು ಪರವಾನಗಿ ಹೊಂದಿರಬೇಕು,
2) ಪೈಪ್‌ಲೈನ್ ಮಣ್ಣು ಕಾಮಗಾರಿಯನ್ನು ಸಂಬಂಧಪಟ್ಟ ಅಭಿಯಂತರರು ಸೂಚಿಸುವ ರೀತಿಯಲ್ಲಿಯೇ ಮಾಡತಕ್ಕದ್ದು,
3) ಪೈಪ್‌ಲೈನ್ ಮಣ್ಣು ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ ದೂರವಾಣಿ ಸಂಪರ್ಕದ ಕೇಬಲ್ ಹಾಗೂ ಇತರೆ ಆಸ್ತಿಪಾಸ್ತಿಗಳಿಗೆ ಹಾನಿಯಾದಲ್ಲಿ ನಗರಸಭೆಯು ಜವಾಬ್ದಾರಿಯಾಗಿರುವುದಿಲ್ಲ,
4) ಪೈಪ್ ಲೈನ್ ಮಣ್ಣು ಕಾಮಗಾರಿಯನ್ನು ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಪ್ರತಿ ಕಾಮಗಾರಿಯ ಮೂರು ಹಂತದ ಛಾಯ ಚಿತ್ರವನ್ನು ತಪ್ಪದೇ ತೆಗೆಯತಕ್ಕದ್ದು.
5) ಪೈಪ್ ಲೈನ್ ಮಣ್ಣು ಕಾಮಗಾರಿಗಳ ಎರಡು ಕೆಲಸಗಳ ಪೈಕಿ ಒಬ್ಬರಿಗೆ ಒಂದಕ್ಕೆ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ.

-2-

**ಷರತ್ತುಗಳು:-ಕ್ರ.ಸಂ.3ರ ಕಾಮಗಾರಿಗೆ:**

1) ಸಬ್ ಮರ್ಸಿಬಲ್ ಮೋಟಾರ್ ವೈಂಡಿಂಗ್ ಹಾಗೂ ಇಂಡೆಕ್ಷನ್ ಮೋಟಾರ್ ವೈಂಡಿಂಗ್ ಕಾಮಗಾರಿಗೆ ಮೂರು ತಿಂಗಳ ಸಾಮರ್ಥ್ಯದ ಅವಧಿ ನೀಡತಕ್ಕದ್ದು,
2) ರಿಪೇರಿ ಮಾಡುವ ಮೋಟಾರು ಪಂಪ್ ಹಾಗೂ ಸ್ಟಾರ್ಟರ್‌ಗಳಲ್ಲಿ ತೆಗೆದ ಹಾಳಾಗಿರುವ ಬಿಡಿಭಾಗಗಳನ್ನು ನಗರಸಭೆಗೆ ನೀಡುವುದು.
3) ಮೋಟಾರ್ ಪಂಪ್ ಸ್ಟಾರ್ಟರ್ ಹಾಗೂ ಇತರೆ ರಿಪೇರಿ ಕೆಲಸಗಳನ್ನು ಸಂಬಂಧಪಟ್ಟ ಅಭಿಯಂತರರ ಸಮ್ಮುಖದಲ್ಲೇ ಮಾಡತಕ್ಕದ್ದು.

**ಷರತ್ತುಗಳು ಮೇಲ್ಕಂಡ ಎಲ್ಲಾ ಕಾಮಗಾರಿಗಳಿಗೆ ಅನ್ವಯಿಸುವಂತೆ:**

1) ಯಾವುದೇ ಕಾರಣಗಳನ್ನು ಕೊಡದೆ ಟೆಂಡರ್‌ಗಳನ್ನು ಒಪ್ಪುವ/ತಿರಸ್ಕರಿಸುವ ಹಕ್ಕನ್ನು ನಗರಸಭೆಯು ಕಾಯ್ದಿರಿಸಿಕೊಂಡಿರುತ್ತೆ.
2) ನಗರಸಭೆಯು ಆಗಿಂದ್ದಾಗ್ಗೆ ವಿಧಿಸುವ ಎಲ್ಲಾ ಷರತ್ತುಗಳಿಗೆ ಬದ್ದರಾಗಿರಬೇಕು,
3) ಟೆಂಡರ್ ಕಾಲಾವಧಿ ಮುಕ್ತಾಯವಾಗುವವರೆಗೆ ದರಗಳಲ್ಲಿ ಏನೇ ವ್ಯತ್ಯಾಸವಾದರು ನಗರಸಭೆಯು ಜವಾಬ್ದಾರಿಯಾಗಿರುವುದಿಲ್ಲ,
4) ಇತರೆ ಹೆಚ್ಚಿನ ವಿಷಯಗಳನ್ನು ಕಛೇರಿಯ ವೇಳೆಯಲ್ಲಿ ಸರ್ಕಾರಿ ರಜೆಗಳನ್ನು ಹೊರೆತುಪಡಿಸಿ ಸಂಬಂಧಪಟ್ಟ ಅಧಿಕಾರಿಗಳಿಂದ ತಿಳಿದುಕೊಳ್ಳಬಹುದು.

**ಸಹಿ:-**
**(ಡಿ.ಕೆ.ರಂಗಸ್ವಾಮಿ)**ಭಾ.ಆ.ಸೇ.
**ಆಡಳಿತಾಧಿಕಾರಿಗಳು,**
ನಗರಸಭೆ, **ದೊಡ್ಡಬಳ್ಳಾಪುರ.**

**ಸಹಿ:-**
**(ಕೆ.ಎಂ.ರಾಮಪ್ಪ)** ಕೆ.ಎಂ.ಎ.ಎಸ್.,
**ಪೌರಾಯುಕ್ತರು,**
ನಗರಸಭೆ, **ದೊಡ್ಡಬಳ್ಳಾಪುರ.**

**" ನಕಲು ಪ್ರತಿ "**

**ಪೌರಾಯುಕ್ತರು,**
ನಗರಸಭೆ, **ದೊಡ್ಡಬಳ್ಳಾಪುರ.**